

# ಕಲ್ಟ್ ಪ್ರೇಮಕಥೆಯಲ್ಲಿ ಧ್ರುವ, ರಚಿತಾ ಜೋಡಿ



ಧ್ರುವ ಸರ್ಜಾ ಹಾಗೂ ರಚಿತಾ ರಾಮ್ ಜೋಡಿ ಎಂಟು ವರ್ಷಗಳ ನಂತರ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದೆ. 2017ರಲ್ಲಿ ಬಿಡುಗಡೆಯಾಗಿದ್ದ 'ಭರ್ಜರಿ' ಸಿನಿಮಾದಲ್ಲಿ ಈ ಜೋಡಿ ಕಾಣಿಸಿಕೊಂಡಿದ್ದು, ಸಿನಿಮಾ ಬ್ಲಾಕ್‌ಬಸ್ಟರ್ ಆಗಿತ್ತು. ಧ್ರುವ ಹಾಗೂ ರಚಿತಾ ಆನ್‌ಸ್ಕ್ರೀನ್ ಕೆಮಿಸ್ಟ್ರಿ ಜನರಿಂದ ಮೆಚ್ಚುಗೆ ತಂದುಕೊಟ್ಟಿತ್ತು. ಇದೇ ಕಾಂಬಿನೇಷನ್ ಮತ್ತೆ ಸದ್ದು ಮಾಡಲು ಹೊರಟಿದೆ.

ಹಾವೇರಿ ಭಾಗದ ನೈಜ ಪ್ರೇಮಕಥೆ ಆಧರಿತ ಸಿನಿಮಾ ಇದಾಗಿದ್ದು, ಧ್ರುವ ಹಾಗೂ ರಚಿತಾ ಜೋಡಿಯಾಗಿದ್ದಾರೆ. ಸಿನಿಮಾಗೆ 'ಕ್ರಿಮಿನಲ್' ಎಂದು ಶೀರ್ಷಿಕೆ ಇಡಲಾಗಿದೆ. ರಗಡ್ ಲುಕ್‌ನಲ್ಲಿ ಕಾಣಿಸಿಕೊಳ್ಳಲು ಧ್ರುವ ತಾಲೀಮು ನಡೆಸಿದ್ದಾರೆ. ಉತ್ತರ ಕರ್ನಾಟಕ ಭಾಷಾ ಶೈಲಿಯನ್ನೂ ಕಲಿಯುತ್ತಿದ್ದಾರೆ. ಧ್ರುವಗೆ ಸರಿಸಾಟಿಯಾಗಿ ರಚಿತಾ ಸ್ಕ್ರೀನ್ ಪ್ರೆಸೆನ್ಸ್ ಇರುವುದಾಗಿ ತಿಳಿದುಬಂದಿದೆ. ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಈ ಚಿತ್ರಕ್ಕೆ ರಾಜ್ ಗುರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಕೆಡಿ' ಸಿನಿಮಾ ನಡುನಡುವೆಯೇ 'ಕ್ರಿಮಿನಲ್' ಸಿನಿಮಾವನ್ನೂ ಧ್ರುವ ಕೈಗೆತ್ತಿಕೊಂಡಿದ್ದಾರೆ. ರಚಿತಾ ಕೂಡ ಹಲವು ಪ್ರಾಜೆಕ್ಟ್‌ಗಳಲ್ಲಿ ತೊಡಗಿಕೊಂಡಿದ್ದಾರೆ. 'ಲ್ಯಾಂಡ್‌ಲಾರ್ಡ್', 'ಕಲ್ಟ್', 'ಅಯೋಗ್ಯ 2' ಸಿನಿಮಾದೊಂದಿಗೆ ಈಗ 'ಕ್ರಿಮಿನಲ್' ಸೇರ್ಪಡೆಯಾಗಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಏಕಕಾಲಕ್ಕೆ ಐದು ಭಾಷೆಗಳಲ್ಲಿ ಈ ಸಿನಿಮಾ ತೆರೆಗೆ ಬರಲಿದೆ. ಚಂದನ್ ಶೆಟ್ಟಿ ಸಂಗೀತ, ವೈದಿ ಛಾಯಾಚಿತ್ರಗ್ರಹಣ, ರವಿವರ್ಮಾ, ವಿಕ್ರಂ ಮೋರ್ ಸಾಹಸ ಸಂಯೋಜನೆ ಚಿತ್ರಕ್ಕಿರಲಿದೆ.



# ತೆಲುಗಿನಲ್ಲಿ ದಿಗಂತ್ ಮೋಡಿ...

ಕನ್ನಡದ ನಟ ದಿಗಂತ್ ಮಂಚಾಲೆ ತೆಲುಗು ಸಿನಿಮಾರಂಗಕ್ಕೆ ಕಾಲಿಡುತ್ತಿದ್ದು, ಸಮಂತಾ ಅವರ ಲವರ್ ಬಾಯ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದೇ ಮೊದಲ ಬಾರಿಗೆ ಬೇರೆ ಭಾಷೆಯ ಸಿನಿಮಾದಲ್ಲಿ ದಿಗಂತ್ ನಟಿಸುತ್ತಿದ್ದು, ನಂದಿನಿ ರೆಡ್ಡಿ ಅವರ 'ಮಾ ಇಂಟಿ ಬಂಗಾರಂ' ಸಿನಿಮಾ ಮೂಲಕ ಎಂಟ್ರಿ ಕೊಟ್ಟಿದ್ದಾರೆ.

''ಲೈಫು ಇಷ್ಟೇನೆ' ಸಿನಿಮಾದಲ್ಲಿ ನನ್ನ ಅಭಿನಯವನ್ನು ನಂದಿನಿ ಅವರು ಮೆಚ್ಚಿದ್ದರು. ನಂದಿನಿ ಪವನ್ ಕುಮಾರ್ ಅವರ ಸ್ನೇಹಿತೆ. ನಂದಿನಿ, ರಾಜ್, ಡಿಕೆ ಹಾಗೂ ಸಮಂತಾ... ಇವರೆಲ್ಲರೂ ಸಿನಿಮಾದಲ್ಲಿದ್ದಾರೆ. ಈ ಕಾಂಬಿನೇಷನ್ ಸಿನಿಮಾವನ್ನು ಯಾರು ಬೇಡ ಅನ್ನಲು ಸಾಧ್ಯ?' ಎಂದು ಹೇಳಿದ್ದಾರೆ.

'ತೆಲುಗು ಭಾಷೆಯನ್ನು ಕಲಿಯುತ್ತಿದ್ದೇನೆ. ಈ ಸಿನಿಮಾ, ನಟನಾಗಿ ನನ್ನ ಕೌಶಲವನ್ನು ಇನ್ನಷ್ಟು ಹರಿತಗೊಳಿಸಲು ಸಹಾಯ ಮಾಡುವ ನಿರೀಕ್ಷೆಯಿದೆ. ಸಿನಿಮಾದಲ್ಲಿ 80ರ ದಶಕದ ಪಾತ್ರಧಾರಿ ನಾನಾಗಿರುವುದು ಕುತೂಹಲ ಮೂಡಿಸಿದೆ' ಎಂದು ವಿವರಿಸಿದ್ದಾರೆ.

'ನಾನು ತೀರ್ಥಹಳ್ಳಿ ಮೂಲದ ಅಪ್ಪಟ ಕನ್ನಡಿಗ. ಬಹಳ ಹೆಮ್ಮೆಯಿಂದ ಕನ್ನಡ ಮಾತಾಡುತ್ತೇನೆ. ಆದರೆ ಸಿನಿಮಾಗೆ ಗಡಿಯಿಲ್ಲ. ಬೇರೆ ಬೇರೆ ಸಿನಿಮಾರಂಗದವರನ್ನು ಕಾಣಲು ಜನರಿಗೂ ಕುತೂಹಲವಿದೆ' ಎನ್ನುತ್ತಲೇ ಸಿನಿಮಾ ಬಜೆಟ್‌ಗಳ ಕಡೆ ಮಾತು ಹೊರಳಿಸಿದ್ದಾರೆ.

''ಈಗ ಕೇವಲ ಬಿಗ್ ಬಜೆಟ್ ಸಿನಿಮಾಗಳಿಗೆ ಹಣ ಹೂಡಲು ಬಯಸುತ್ತಾರೆ. ಯಾರಿಗೂ ಸಣ್ಣ ಅಥವಾ ಮಧ್ಯಮ ಬಜೆಟ್ ಸಿನಿಮಾ ಮಾಡಲು ಆಸಕ್ತಿ ಇಲ್ಲ. ಇಂಥದ್ದೇ ಸಿನಿಮಾಗಳಲ್ಲಿ ನಟಿಸಿಕೊಂಡು ಬಂದವರ ಕಥೆಯೇನು? ಈಚೆಗೆ ರಿಲೀಸ್ ಆದ 'ಸು ಫ್ರಂ ಸೋ' ಈ ನಿಟ್ಟಿನಲ್ಲಿ ಸಣ್ಣ ಆಶಾಕಿರಣವಾಗಿ ಕಂಡಿತು. ದೊಡ್ಡದು–ಸಣ್ಣದು ಎರಡೂ ಬಜೆಟ್‌ಗಳ ಸಿನಿಮಾಗಳಿದ್ದರೆ ಮಾತ್ರ ಸಿನಿಮಾರಂಗ ಸಮತೋಲಿತವಾಗಿ ಮುನ್ನಡೆಯುತ್ತದೆ'' ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.